ಆರ್ ಬಿ ಐ / 2005 –06 / 188
ಡಿಜಿಬಿಎ.ಜಿಎಡಿ. ಸಂಖ್ಯೆ .ಹೆಚ್– 412 / 42.01.034 / 2005–06

ಅಕ್ಟೋಬರ್ 25,2005
ಕಾರ್ತಿಕ 3, 1927 (ಶಕ)

ಅಧ್ಯಕ್ಷರು / ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ನಿಯಮಿತ ಸೇರಿದಂತೆ
ಎಲ್ಲ ಏಜೆನ್ಸಿ ಬ್ಯಾಂಕುಗಳು

ಮಾನ್ಯರೆ,

**ಒಎಲ್‌ಟಿಎಸ್ ( ಓಲ್ಟಾಸ್ ) – ನೇರ ತೆರಿಗೆ ಚಲನ್‌ಗಳಿಗೆ ಡ್ರಾಪ್ ಬಾಕ್ಸ್ ಸೌಲಭ್ಯ**

ಅನ್ ಲೈನ್ ತೆರಿಗೆ ಲೆಕ್ಕ ನಿರ್ವಹಣಾ ವ್ಯವಸ್ಥೆಯಲ್ಲಿ ( ಓಲ್ಟಾಸ್ ) ಪ್ಯಾನ್‌ಗೆ / ಟ್ಯಾನ್‌ಗೆ ಸಂಬಂಧಿಸಿದಂತೆ ಭಾರೀ ಪ್ರಮಾಣದ ದತ್ತಾಂಶ ನಮೂದು ದೋಷಗಳು ಪತ್ತೆಯಾಗುತ್ತವೆ ಎಂಬುದಾಗಿ ಆದಾಯ ತೆರಿಗೆ ನಿರ್ದೇಶನಾಲಯವು ವರದಿ ಮಾಡಿದೆ. ಅಂಥ ದೋಷಗಳಿಗೆ ಕಾರಣಗಳಲ್ಲೊಂದೆಂದರೆ ಶಾಖೆಗಳಲ್ಲಿರುವ ' ಡ್ರಾಪ್ ಬಾಕ್ಸ್‌ಗಳಲ್ಲಿ' ತೆರಿಗೆ ಪಾವತಿದಾರರು ಚಲನ್‌ಗಳನ್ನು ಹಾಕುತ್ತಿರುವುದು. ಚಲನ್ ಗಳನ್ನು ಹಾಕುತ್ತಿರುವ ಪದ್ಧತಿಯಿಂದ ಓಲ್ಟಾಸ್ ನಲ್ಲಿ ಚಲನ್ ವಿವರಗಳನ್ನು ಅಳವಡಿಸುವುದಕ್ಕೆ ಮೊದಲು ಚಲನ್ ಸಲ್ಲಿಸಿದವನಿಂದ ಪ್ರಾಥಮಿಕ ವಿಚಾರಣೆಗಳನ್ನು ಮಾಡಿ ವಿಷಯ ತಿಳಿದುಕೊಳ್ಳುವುದಕ್ಕೆ ಬ್ಯಾಂಕ್ ನೌಕರರಿಗೆ ಸಾಧ್ಯವಾಗುತ್ತಿಲ್ಲ.

2. ಮೂಲ ದತ್ತಾಂಶ ನಮೂದಿನಲ್ಲಿ ದೋಷಗಳನ್ನು ನಿವಾರಿಸುವ ದೃಷ್ಟಿಯಿಂದ , ಓಲ್ಟಾಸ್ ಕುರಿತ ಉನ್ನತಾಧಿಕಾರ ಸಮಿತಿಯು ನೇರ ತೆರಿಗೆ ಚಲನ್‌ಗಳನ್ನು ಡ್ರಾಪ್ ಬಾಕ್ಸ್‌ಗಳಲ್ಲಿ ಹಾಕುವುದಕ್ಕೆ ಅವಕಾಶ ನೀಡಬಾರದು ಎಂದು ನಿರ್ಧರಿಸಿದೆ. ಆದ್ದರಿಂದ ನೇರ ತೆರಿಗೆ ಚಲನ್ ಗಳನ್ನು ಡ್ರಾಪ್‌ಬಾಕ್ಸ್‌ಗಳಲ್ಲಿ ಹಾಕುವುದನ್ನು ತಡೆಯಲು ಸೂಕ್ತ ನೋಟೀಸುಗಳನ್ನು ಪ್ರದರ್ಶಿಸುವಂತೆ ನೇರ ತೆರಿಗೆಗಳನ್ನು ಸಂಗ್ರಹಿಸುವುದಕ್ಕೆ ಅಧಿಕಾರ ಪಡೆದಿರುವ ಶಾಖೆಗಳಿಗೆ ತಿಳಿಸುವಂತೆ ನಿಮ್ಮನ್ನು ಕೋರಲಾಗಿದೆ.

ತಮ್ಮ ವಿಶ್ವಾಸಿ

(ಎಂ. ಟಿ. ವರ್ಗೀಸ್)
ಪ್ರಧಾನ ವ್ಯವಸ್ಥಾಪಕ